ಕತೆ

# ನಾಟಕೀಯ




## ಪ್ರೇಮಕುಮಾರ್ ಹರಿಯಬ್ಬೆ

ಕಲೆ: ಸಂತೋಷ್ ಸಸಿಹಿತ್ಲು


'ಊರಿನ ಗ್ರಹಚಾರ ಕೆಟ್ಟಿದೆ. ಮೂರು ವರ್ಷಗಳಿಂದ ಸರಿಯಾಗಿ ಮಳೆ ಆಗಿಲ್ಲ. ಕೆರೆ ಕಟ್ಟೆಗಳು ಒಣಗಿವೆ. ದನಕರುಗಳು ಮೇವಿಲ್ಲದೆ ಸಾಯ್ತಿವೆ. ಪ್ರಾಯದ ಹುಡುಗರೆಲ್ಲ ಊರು ಬಿಟ್ಟು ಹೋಗ್ತಿದ್ದಾರೆ, ಇಷ್ಟು ಸಾಲದೇನ್ರಯ್ಯ ಕೇಡುಗಾಲ ಶುರುವಾಗಿದೆ ಅಂಬದಕ್ಕೆ...' ಇನ್ನೂ ಕೆಟ್ಟದ್ದಾಗೋ ಮೊದಲು ಏನಾದರೂ ಮಾಡಬೇಕು... ಅಂತ ಶಾಸ್ತ್ರಿ ಮೂಡ್ಲಪ್ಪ ಹೇಳ್ತಿದ್ದಾನಂತೆ. ಅವನು ಹೇಳಿದ ಮೇಲೆ ಇನ್ನೂ ಕೆಟ್ಟದ್ದೇನೋ ಆಗುತ್ತೆ ಅಂತ ಊರವರಿಗೆ ಭಯವಾಯಿತು.

'ದೇವರುಗಳನ್ನೆಲ್ಲ ಹೊರಡಿಸಿ ಊರಸುತ್ತ ಮೂರು ರೌಂಡು ಸುತ್ತಾಡಿಸಿಕೊಂಡು ಬಂದರೆ ಎಲ್ಲ ಸರಿಹೋಗುತ್ತೆ ಅಂತ ಯಾರೋ ಹೇಳಿದರು. ಇದು ಶನಿದೇವರ ಸಿಟ್ಟು. ಶನಿಮಹಾತ್ಮೆ ಆಡಿಸ್ತೀನಿ ಅಂತ ಪಾಳ್ಯದ ಮೂರ್ಕಣ್ಣಪ್ಪ ಪಾವಗಡಕ್ಕೆ ಹೋಗಿ ಹರಕೆ ಕಟ್ಕೊಂಡ್ ಬಂದಿದ್ನಲ್ಲ ನೆನಪಿದೆಯಾ? ನಾಟ್ಕಕ್ಕೆ ಊರವರಿಂದ ಚಂದಾ ಎತ್ತಿದ್ದ. ಆದ್ರೆ ನಾಟ್ಕ ನಡೀಲಿಲ್ಲ. ಅವನು ಸಾಯುವ ದಿನವೂ ಸ್ವಾಮಿ ಹರಕೆ ಹಂಗೇ ಉಳೀತು ಅಂತ ಹೇಳ್ತಲೇ ಪ್ರಾಣಬಿಟ್ಟ. ಅದರ ಎಫೆಕ್ಟು ಇದು ಅಂತ ಇನ್ಯಾರೊ ಅಂದರು. ಅಳ್ಳಿದೆಯವರು ಜಿಲ್ಲಾ ಪಂಚಾಯ್ತಿ ಮಾಜಿಮೆಂಬರು ಬಾಬಣ್ಣನ ಮನೆಗೆ ಹೋಗಿ ಊರ ಗ್ರಾಚಾರ ಕೆಟ್ಟಿದೆ ಅಂತ ಎಲ್ರೂ ಹೇಳ್ತಿದ್ದಾರಪ್ಪ, ಶನಿಮಹಾತ್ಮೆ ಆಡಿಸಿದರೆ ಸರಿಹೋಗಬೌದು...' ಅಂದರು.

'ನಮ್ ಮೂರ್ಕಣ್ ಮಾಮಾರು ಶನಿಮಹಾತ್ಮೆ ಆಡಿಸಬೇಕು ಅಂತ ತಯಾರಿ ಮಾಡಿಕಂಡಿದ್ರು. ಆದರೆ, ನಾಟ್ಕ ನಡೀಲಿಲ್ಲ. ನಮ್ಮಿಂದ ಅಪಚಾರ ಆಗಿದೆ. ನಾಟಕಕ್ಕೆ ಅಂತ ಊರವರಿಂದ ಎತ್ತಿದ್ದ ಐವತ್ತುಸಾವಿರ ಚಂದಾ ದುಡ್ಡು ನಮ್ಮತ್ರಲೇ ಐತೆ...' ಅಂತ ಮೂರ್ಕಣ್ಣಪ್ಪನ ಅಳಿಯ ಮಾಲಿಂಗಪ್ಪ ಯಾವಾಗಲೋ ಹೇಳಿದ್ದು ಬಾಬಣ್ಣನಿಗೆ ನೆನಪಾಯಿತು.

'ಈಗ ಶನಿಮಹಾತ್ಮೆ ಆಡೋರು, ಆಡಿಸೋರು ಯಾರಿದ್ದಾರೆ? ರಾಮಣ್ಣ ಮೇಷ್ಟ್ರಿಗೆ ವಯಸ್ಸಾಯ್ತು. ಅವರನ್ನ ಬಿಟ್ರೆ ನಮ್ ತಾಲ್ಲೂಕಲ್ಲೇ ಪೌರಾಣಿಕ ನಾಟ್ಕ ಆಡಿಸೋರಿಲ್ಲ. ಏನು ಮಾಡಬೇಕು ಅಂಬದನ್ನು ಯೋಚನೆ ಮಾಡಕಾದರೂ ಸ್ವಲ್ಪ ಟೈಮು ಕೊಡ್ರಿ ಅಂತ ಬಾಬಣ್ಣ ಹೇಳಿದ ಅನ್ನೋದು ಗೊತ್ತಾದ ಮೇಲೆ ಊರಿನ ಕಲಾವಂತ ಹುಡುಗರು ಚುರುಕಾದರು. ಎಲ್ಲರೂ ಒಟ್ಟಾಗಿ ಬಾಬಣ್ಣನ ಮನೆಗೆ ಹೋಗಿ ಅಣಾ, ನೀವು ಹ್ಞೂ ಅನ್ನಿ, ನಾವು ಶನಿಮಹಾತ್ಮೆ ಆಡ್ತೀವಿ...' ಅಂದರು.

'ಶನಿಮಹಾತ್ಮೆ ಆಡದು ನೀವು ಅಂದ್‌ಕಂಡಷ್ಟು ಸಲೀಸಲ್ಲ. ಹೆಜ್ಜೆ ಹೆಜ್ಜೆಗೆ ವಿಘ್ನಗಳು ಬರ್ತವೆ. ಊರಲ್ಲಿ ಒಗ್ಗಟ್ಟಿಲ್ಲ, ನಾಟಕದ ಸಾವಾಸ ಬ್ಯಾಡ್ರಯ್ಯ. ಬರೋ ಶ್ರಾವಣದಲ್ಲಿ ಶನಿಮಹಾತ್ಮೆ ಕಥೆ ಓದಿಸಣ...' ಅಂದ.